# ನಮ್ಮೂರ ಹಬ್ಬಗಳು, ಜನರು...



‘ಶರಣರ ನಾಡು’ ಶಿಕಾರಿಪುರದ ಭಾಷೆ ಇತ್ತ ಬಯಲುಸೀಮೆಗಿಂತ, ಅತ್ತ ಪೂರ್ಣ ಮಲೆನಾಡಿಗಿಂತ ವಿಭಿನ್ನವಾಗಿ ರೂಪುಗೊಂಡಿದೆ. ಊರಿನ ಆಚರಣೆಗಳೊಂದಿಗೆ ತಳಕು ಹಾಕಿಕೊಂಡ ಬಾಲ್ಯದ ಸಂಭ್ರಮದ ನೆನಪುಗಳನ್ನು ಶಿವಮೊಗ್ಗದ ಶಿಕಾರಿಪುರದ ಭಾಷೆಯಲ್ಲಿ ತೆರೆದಿಟ್ಟಿದ್ದಾರೆ

ಕೆ. ನಿರ್ಮಲ ಮರಡಿಹಳ್ಳಿ



ಹೋರಿ ಬೆದರಿಸುವ ಸ್ಪರ್ಧೆ

ನಾವು ಯೇಳೋದ್ರೊಳಾಗೇ ಪತ್ತೂರೋರು ಮನೇರು ಎದ್ದು ಅಡ್ಗಿ ಮಾಡ್ತಿದ್ರು. ವಂದಕ್ಕಂತ ಹಿತ್ಲಿಗೋದಾಗ ಒಲಿ ಉರಿಯೋದು, ಮನೇರೆಲ್ಲಾ ಓಡಾಡೋದು ಕಾಣ್ತಿತ್ತು. ಆಮ್ಯಾಲಿಂದ ಒಲ್ಯಾಗಿನ ಬೂದಿ ತಗ್ದು, ನಿಂಬೆಹಣ್ಣಿನಷ್ಟು ಸಗಣಿ ತಗಂಡು ಒಲಿಬಳ್ದು, ಅಡ್ಗಿಮನಿ ಕಸ ಹೊಡ್ಕಂಡ್ಮೇಲೆ ಚೌಟು ತಗೊಂಡೋಗಿ ಪತ್ತೂರೋರು ದೇವಜ್ಜಿ ಹತ್ರ ಕೆಂಡ ತಗಂತನಜ್ಜಿ ಅಂದ್ರೆ, ತಗಾಹೋಗೆ ಅನ್ನೋದು. ಒಲ್ಯಾಗಿನ ಉರಿಯೊ ಕಟ್ಗಿ ಸರ್ಸಿ, ಕೆಂಡಾನ ಚೌಟ್ನಾಗೆ ತಗಂಡ್ಬಂದು ನಮ್ಮನಿ ಒಲಿಯೊಳಗಾಕಿ, ಮ್ಯಾಲೆ ಚಕ್ಕಿಗಳ್ನಿಟ್ಟು, ಉದ್ಕೊಳ್ವಿ ತಗಂಡು ಪುಸ್... ಪಸ್ನಾಂತ ಊದಿದ್ರೆ ಹಂಗೆ ಹೊಗಿಯೆದ್ದು ಬೆಂಕಿ ಹತ್ಕಾಳಾದು.

ಕಾಪೀಗೆ ಚರಗಿಯಿಟ್ಟು ನೀರು, ಕಾಪ್ಪುಡಿ ಹಾಕಿ ಕುದಿಯಾಕೆ ಸಣ್ಣುರಿ ಮಾಡಿ ಹಕ್ಕಿಮನಿ ಹತ್ರ ಬಂದು, ಬುಟ್ಟಿ ತಗ್ದು ಕೋಳಿಗುಳ್ನೆಲ್ಲಾ ಬಿಡೋದು. ಉಷ್ಉಷ್ ಅಂತ ಹೊರಾಗೋಡ್ಸಿ, ಕೋಳಿಹೇಲ್ನ ತಗ್ದು ತಿಪ್ಪಿಗಾಕಿ ಹಂಗೆ ಚೂರು ಸಗ್ಣಿ ತಗಂಡ್ಬಂದು, ಕೋಳಿ ಮುಚ್ಚಿರೊ ಜಾಗನ್ನೆಲ್ಲಾ ಕಮ್ಮುಗೆ ಬಳ್ದು, ಕೈತೊಕ್ಕಂಡು ಬಂದ್ರೆ, ಕಾಪಿ ಕುದ್ಕುದ್ದು ಗಟ್ಟೀಗೆ ಕರೆಕಾಪಿ ಆಗಿರೋದು. ಅದಕ್ಕೆ ಗಟ್ಟಿಹಾಲು ಸಕ್ಕರಿ ಹಾಕಿ, ಎತ್ಲೋಯ್ದು, ಪಾವಿನ್ಲೋಟ ತುಂಬಾ ಕಾಪಿ ಹಾಕ್ಕೊಂಡು, ಹಿಂತ್ಲಾಗೆ ದಾಸವಾಳ್ದ ಗಿಡದ್ಕೆಳಾಗೆ ಕುಂತ್ಕಂಡು ಕಾಪಿ ಕುಡಿಯೊ ಸುಖಕ್ಕೆ ಯಾರೂ ಅಡ್ಬರಂಗಿಲ್ಲ. ಪಾರತಜ್ಜಿ ಪಾಪ, ಸೊಂಟ ಬಗ್ಗಿಸ್ಕಂಡೆ ಮನಿ ಕಸಹೊಡ್ದು ಬಾಗ್ಲುಗುಳ್ಗೆ ಹೂವ ಮುಡ್ಸಿರೋದು. ಆಮ್ಯಾಕೆ ನಿನ್ನೆ ಸಾರನ್ನ ಕುದ್ಸಿಟ್ಟು ರೊಟ್ಟೀಗೆ ಹಿಟ್ಕೂಡಿಸ್ಕಂಡು, ಪಲ್ಯ, ರೊಟ್ಟಿ ಮಾಡಿದ್ರೆ ಬೆಳ್ಗಿಂದು ಮುಗೀತು ಅಷ್ಟೇ. ಅಷ್ಟಾಗೆ ಯಾರಾರ ಬರೋರು.

ಏನ್ ಮಾಡಾಕತ್ತಿ ಅಂತ ಬೋವೇರ್ಗೆರಿ ಗಂಗಕ್ಕ ಜಲ್ದಿ ತುಂಬಾ ಹೊನ್ನಾಗನಿ ಸೊಪ್ನ ತರೇಕಿ.